

# ಬಿ.ಆರ್. ಲಕ್ಷ್ಮಣರಾವ್

ನವ್ಯ ಸಾಹಿತ್ಯದ ಪ್ರಮುಖ ಲೇಖಕ ಬಿ.ಆರ್. ಲಕ್ಷ್ಮಣರಾವ್. ಅವರು ಹುಟ್ಟಿದ್ದು ಸೆಪ್ಟೆಂಬರ್ 9, 1946ರಲ್ಲಿ. ಊರು ಚಿಕ್ಕಬಳ್ಳಾಪುರ ಜಿಲ್ಲೆಯ ಚೀಮಂಗಲ. ಲಕ್ಷ್ಮಣರಾವ್ ಅವರ ತಂದೆ ಬಿ.ಆರ್. ರಾಜಾರಾವ್. ತಾಯಿ ವೆಂಕಟಲಕ್ಷ್ಮಮ್ಮ.
ಪ್ರಾರಂಭಿಕ ಶಿಕ್ಷಣವನ್ನು ಚಿಂತಾಮಣಿಯಲ್ಲಿ ಪೂರೈಸಿ, ಬಳಿಕ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಬಿ.ಎಡ್ ಪದವಿಗಳನ್ನು ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಪಡೆದರು. ಚಿಂತಾಮಣಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ, ಬಳಿಕ ಅದೇ ಊರಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಯೊಂದನ್ನು ನಡೆಸಿದ ಬಿಆರ್‌ಎಲ್ ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ; ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.
'ಗೋಪಿ ಮತ್ತು ಗಾಂಡಲೀನ', 'ಟುವಟಾರ', 'ಲಿಲ್ಲಿ ಪುಟ್ಟಿಯ ಹಂಬಲ', 'ಶಾಂಗ್ರಿಲಾ', 'ಅಪರಾಧಂಗಳ ಮನ್ನಿಸೊ', 'ಎಡೆ', 'ಇವಳು ನದಿಯಲ್ಲ', 'ನನ್ನ ಮಟ್ಟಿಗೆ' ಸೇರಿದಂತೆ ಎಂಟು ಕವನ ಸಂಗ್ರಹಗಳು, 'ಜೆಸ್ಟರ್', 'ಕಬ್ಬೆಕ್ಕು' ಕಥಾ ಸಂಗ್ರಹಗಳು, ಒಂದು ಕಾದಂಬರಿ, ಮೂರು ನಾಟಕಗಳು, ಮೂರು ಲೇಖನಗಳ ಸಂಗ್ರಹ, ಎರಡು ಅನುವಾದಿತ ಕೃತಿಗಳು ಪ್ರಕಟವಾಗಿವೆ.
ಚುಟುಕ, ಹನಿಗವನ, ವಿಡಂಬನೆ ಸೇರಿದಂತೆ ಕಾವ್ಯದ ಅನೇಕ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಮುಖ್ಯವಾಗಿ ಭಾವಗೀತೆಗಳ ಕವಿ. 'ಸುಬ್ಬಾಭಟ್ಟರ ಮಗಳೇ', 'ಆಲಿಂಗನ', 'ನನ್ನವಳು', 'ಹೇಳಿಹೋಗು ಕಾರಣ', 'ಬಾ ಮಳೆಯೇ ಬಾ', 'ಯಾರಿವಳೀ ಬೆಳದಿಂಗಳು?', 'ಹೇಗಿದ್ದೀಯೆ ಟ್ವಿಂಕಲ್?' ಅವರ ಭಾವಗೀತೆಗಳ ಧ್ವನಿಮುದ್ರಿಕೆಗಳಾಗಿವೆ.

ಇವರಿಗಿದೆ. ಆದರೂ ಇವರು ನಮ್ಮೊಂದಿಗೆ ಒಬ್ಬ ಸಾಮಾನ್ಯ ಗುಮಾಸ್ತರಾಗಿ ದುಡಿದು ಜೀವನೋಪಾಯ ಸಂಪಾದಿಸಿಕೊಳ್ಳುತ್ತಿದ್ದಾರೆ. ಇವರಿಗೆ ದೀನದಲಿತರ ಬಗ್ಗೆ, ಶೋಷಿತರ ಬಗ್ಗೆ ಅಪಾರ ಕಳಕಳಿ ಇದೆ. ಅಂಥವರ ಏಳಿಗೆಗಾಗಿ ಹೋರಾಡುವ ಹುಮ್ಮಸ್ಸಿದೆ. ಇವರು ನಮ್ಮ ಬ್ಯಾಂಕಿನ 'ನೌಕರರ ಸಂಘ'ದ ಕಾರ್ಯದರ್ಶಿಯೂ ಆಗಿದ್ದಾರೆ. ಇವರಿಗೆ ನಮ್ಮ 'ಕನ್ನಡ ಸಂಘ'ದ ಪರವಾಗಿ ಹಾರ್ದಿಕ ಅಭಿನಂದನೆಗಳು.' ಗಡಚಿಕ್ಕುವ ಚಪ್ಪಾಳೆಯ ನಡುವೆ ಚಂದ್ರ ನನ್ನಿಂದ ಬಹುಮಾನ ಸ್ವೀಕರಿಸಿ ಹೋದ.